ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 552
2. ಮಾನ್ಯ ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 24/09/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೀದರ್ ಜಿಲ್ಲೆಯಲ್ಲಿ ಪೊಲೀಸರಿಗೆ ನಿರ್ಮಿಸಲಾದ ಅನೇಕ ವಸತಿ ಗೃಹಗಳು ಶಿಥಿಲಾವಸ್ಥೆಗೆ ಬಂದಿದ್ದು, ಅವರು ಭಯದ ವಾತಾವರಣ ದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳನ್ನು ನವೀಕರಣಗೊಳಿಸಲು ಅಥವಾ ಹೊಸ ವಸತಿಗೃಹ ಕಟ್ಟಲು ಸರ್ಕಾರದ ಯೋಜನೆ ಇದೆಯೇ; ಇದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು; ಇಲ್ಲದಿದ್ದಲ್ಲಿ, ಇದಕ್ಕೆ ಕಾರಣವೇನು?	ಬೀದರ್ ಜಿಲ್ಲೆಯ ಭಾಲ್ಕಿ ನಗರದಲ್ಲಿ 42 ಹಾಗೂ ಹುಲಸೂರದಲ್ಲಿ 14 ಒಟ್ಟು 56 ಶಿಥಿಲಗೊಂಡ ವಸತಿ ಗೃಹಗಳಲ್ಲಿ ಯಾವುದೇ ಸಿಬ್ಬಂದಿ ವಾಸವಾಗಿರುವುದಿಲ್ಲ. ಈಗಾಗಲೇ ಬೀದರ್ ಜಿಲ್ಲೆಯಲ್ಲಿ ಬೀದರ್ ನಗರದ ಪಕ್ಕಲವಾಡಾ, ಜನವಾಡಾ ಮತ್ತು ಮಂಠಾಳಾ ಪೊಲೀಸ್ ವಸತಿ ಗೃಹಗಳ ನವೀಕರಣ/ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಮುಂದುವರೆದು, ಗೃಹ 2020 ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಗೆ ಒಟ್ಟು 260 ಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ವಸತಿ ಗೃಹಗಳು ನಿರ್ಮಾಣವಾಗಿರುತ್ತವೆ. ಹಾಗೂ ಪೊಲೀಸ್ ಗೃಹ 2025 ಯೋಜನೆಯಡಿಯಲ್ಲಿ ಹೊಸದಾಗಿ ವಸತಿಗೃಹ ನಿರ್ಮಾಣ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಸಂಖ್ಯೆ:ಹೆಚ್‌ಡಿ 82 ಪಿಬಿಎಲ್ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು